# ಕೆನ್ನಾಯಿಗಳು ಮತ್ತು ಕ್ರೌರ್ಯ!

## ಅರಣ್ಯಾಧಿಕಾರಿಯ ಅನುಭವ ಕಥನ



**ಜೀವಂತ ಪ್ರಾಣಿಯನ್ನೇ ಹಸಿಹಸಿಯಾಗಿ ತಿನ್ನುವ ಕ್ರೌರ್ಯ ಕೆನ್ನಾಯಿಗಳದ್ದು. ಜಿಂಕೆಯನ್ನು ಬೆನ್ನಟ್ಟಿದ ಕೆನ್ನಾಯಿ ಗುಂಪಿನ ಬೇಟೆಯ ಈ ಕಥನ, ಹಸಿವು ಮತ್ತು ಜೀವಪ್ರೀತಿಯ ತುಡಿತದ ಮಧ್ಯದ ಸಂಘರ್ಷಕ್ಕೂ ಕನ್ನಡಿ ಹಿಡಿದಂತಿದೆ.**

■ ಶ್ರೀಧರ ಪತ್ತಾರ

ಕೃಪಾಕರ ಮತ್ತು ಸೇನಾನಿಯವರು ವರ್ಷಗಟ್ಟಲೆ ಹುಲಿಕಾಡಲ್ಲಿ ಸುತ್ತಾಡಿ ಮಾಡಿದ ಸಾಕ್ಷ್ಯಚಿತ್ರ– ‘ದಿ ಪ್ಯಾಕ್’. ನಾನು ಆ ವಿಡಿಯೊವನ್ನು ಮೊದಲ ಬಾರಿಗೆ ನೋಡಿದ್ದು ನನ್ನ ತರಬೇತಿ ಅವಧಿಯಲ್ಲಿ. ಅದಾದ ನಂತರ ಅದೆಷ್ಟು ಬಾರಿ ನೋಡಿದ್ದೆನೋ. ಆ ವಿಡಿಯೊ ನೋಡನೋಡುತ್ತಲೇ ಮೈ ಜುಂ ಎಂದಿತ್ತು.

ಕ್ರೌರ್ಯದ ಪ್ರತಿರೂಪದಂತಿರುವ ಆ ಕೆನ್ನಾಯಿಗಳು ನನ್ನೊಳಗೆ ಕೋಲಾಹಲವೆಬ್ಬಿಸಿದ್ದವು. ಅವುಗಳ ಸ್ವಭಾವ ಮತ್ತು ಬದುಕಿನ ರೀತಿ ಸೋಜಿಗ ಹುಟ್ಟಿಸಿದ್ದವು. ಕಾಡಿನಲ್ಲಿದ್ದಷ್ಟೂ ದಿನ ಆಗಾಗ ಕಾಣುತ್ತಿದ್ದ ಅವುಗಳು ನನಗೆ ದಕ್ಕಿಸಿಕೊಟ್ಟ ಅನುಭವ ಹೃದಯವಿದ್ರಾವಕ. ಅಂಥದೊಂದು ಅನುಭವ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿರುವೆ.

ನಾನು ಬಂಡೀಪುರದ ಕಳ್ಳಬೇಟೆ ಶಿಬಿರಕ್ಕೆ ಹಾಜರಾದ ಹೊಸತು. ಗಸ್ತು ಮುಗಿಸಿ ವಾಪಸ್ ಬರುವ ಹೊತ್ತಿಗೆ ಸಮಯ ಸಂಜೆ ಆರಾಗಿದ್ದಿತೇನೋ... ಕ್ಯಾಂಪು ನೂರು ಹೆಜ್ಜೆ ದೂರವಿತ್ತಷ್ಟೆ. ನಮ್ಮ ಮಗ್ಗುಲಲ್ಲೇ ಜಿಂಕೆಯೊಂದು ಚಂಗನೆ ಜಿಗಿದುಹೋಯ್ತು. ನಾನು, ವಾಚರ್ ಚಿಕ್ಕಮಾದ, ಚನ್ನಶೆಟ್ಟಿ, ಮೂವರೂ ಒಂದು ಕ್ಷಣ ಬೆಚ್ಚಿದೆವು. ಅದು ಹಾಗೇಕೆ ಹಾರಿತು ಎಂದು ಆ ಕ್ಷಣಕ್ಕೆ ಹೊಳೆಯಲಿಲ್ಲ. ನಾವು ದಿಕ್ಕಿಗೊಬ್ಬರು ಕಣ್ಣು ಹಾಯಿಸಿದೆವು.

‘ಅಲ್ನೋಡಿ ಸರ್... ಕೆನ್ನಾಯಿಗಳು’ ಎಂದ ಚಿಕ್ಕಮಾದ. ಅತ್ತ ತಿರುಗಿ ನೋಡಿದರೆ, ಎಂಟ್ಹತ್ತು ಕೆನ್ನಾಯಿಗಳು ಸ್ವಲ್ಪ ದೂರದಲ್ಲೇ ತೇಕುತ್ತಾ ನಿಂತಿದ್ದವು. ಜಿಂಕೆಯನ್ನು ಎಲ್ಲಿಂದ ಅಟ್ಟಿಸಿಕೊಂಡು ಬಂದಿದ್ದವೋ? ಅವು ನಮ್ಮನ್ನು ಕಂಡೊಡನೆ ಜಿಂಕೆಯನ್ನು ಬಿಟ್ಟು ಸುಮ್ಮನೆ ಕುಳಿತುಬಿಟ್ಟವು. ಆದರೆ ಎರಡುಮೂರು ಕೆನ್ನಾಯಿಗಳು ನಮಗೆ ಕಾಣದಂತೆ ಪೊದೆಯೊಳಗಿಂದ ನುಸುಳಿರಬೇಕು. ಮುಂದೆ ಹೋಗಿ ನಮ್ಮ ಕಣ್ಣಳತೆ ದೂರದಲ್ಲೇ ಆ ಜಿಂಕೆಯನ್ನು ಅಡ್ಡಹಾಕಿದವು.

ನಾವು ಲಗುಬಗೆಯಿಂದ ಕ್ಯಾಂಪಿನೆಡೆಗೆ ಹೆಜ್ಜೆ ಹಾಕಲು ಮುಂದಾದೆವು. ಇದಕ್ಕೇ ಕಾದು ಕುಳಿತಿದ್ದ ಆ ಎಲ್ಲ ಕೆನ್ನಾಯಿಗಳು ಮತ್ತೆ ಜಿಂಕೆಯೆಡೆಗೆ ಮುಖಮಾಡಿದವು. ಕ್ಯಾಂಪಿನ ಎದುರಲ್ಲಿ ಹುಲ್ಲುಗಾವಲಿನಂತಹ ಜಾಗ. ಸರಿಸುಮಾರು ಅರ್ಧ ಕಿ.ಮೀ.ನಷ್ಟು ದೂರಕ್ಕೆ ದೃಷ್ಟಿ ಹರಿಯುತ್ತಿತ್ತು. ಎಲ್ಲ ದಿಕ್ಕುಗಳಿಂದ ಅಟ್ಟಿಸಿ ಹೋಗುತ್ತಿದ್ದ ಕೆನ್ನಾಯಿಗಳಿಗೆ ಸಿಗದ ಜಿಂಕೆ ಬಹಳ ವೇಗದಿಂದ ಓಡುತ್ತಿತ್ತು. ನಾಯಿಗಳೂ ಹಿಂದೆ ಸರಿಯಲಿಲ್ಲ. ಇನ್ನೇನು ದೂರದಲ್ಲೆಲ್ಲೋ ಕೆನ್ನಾಯಿಗಳೆಲ್ಲ ಜಿದ್ದಿಗೆ ಬಿದ್ದಂತೆ ಜೀವಂತ ಜಿಂಕೆಯ ಮಾಂಸ ಹರಿದು ತಿನ್ನುತ್ತಿರಬಹುದು ಎಂದುಕೊಳ್ಳುತ್ತಿದ್ದರೆ, ಆ ಜಿಂಕೆ ವಾಪಸ್ ಓಡುತ್ತಾ